**ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:13-11-2020 ರ ನಡವಳಿಗಳು**

**ವಿಷಯದ ಸಂಖ್ಯೆ: 497/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಯೋಜನೆ ಕೇಂದ್ರ ಶಾಖೆಯ ಎಂಪಿಇಡಿ ವಿಭಾಗದಲ್ಲಿ ಕೈಗೊಳ್ಳುವ ಕಾಮಗಾರಿಯಾದ Providing security service to head office premises for the year 2020-21ನೇ ಸಾಲಿನ ಪಾಲಿಕೆಯ ಅಯುವ್ಯಯದಲ್ಲಿರುವ ಲೆಕ್ಕ ಶಿರ್ಷಿಕೆ ಪಿ ಕೋಡ್-3429 ರ ಅಡಿಯಲ್ಲಿ ರೂ.103.20 ಲಕ್ಷಗಳ ಮೊತ್ತವು ಅನುವು ಮಾಡಲು ವರದಿ ಸಲ್ಲಿಸಲಾಗಿದೆ.

ಮುಖ್ಯ ಆರ್ಥಿಕ ಅಧಿಕಾರಿರವರು ಕಂಡಿಕೆ 4 ರಲ್ಲಿ ಸದರಿ ಕಾಮಗಾರಿಗೆ ಜಾಬ್‌ಸಂಖ್ಯೆ ನೀಡಿರುವುದಿಲ್ಲ, ಆಡಳಿತಾತ್ಮಕ ವೆಚ್ಚಗಳಿಗೆ ಜಾಬ್‌ಸಂಖ್ಯೆ ಅವಶ್ಯವಿರುವುದಿಲ್ಲ ಮತ್ತು ಅನುದಾನವು ಅಯುವ್ಯಯದಲ್ಲಿ ಮೀಸಲಿರಿಸಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ. ಮೇಲಿನ ಕಾಮಗಾರಿಗೆ ಅವಶ್ಯವಾದ ಅನುದಾನ ರೂ.103.20 ಲಕ್ಷಗಳು ಮತ್ತು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಅಧಿಕಾರವು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವ್ಯಾಪ್ತಿಗೆ ಬರುತ್ತದೆ.

ಈ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ ಪ್ರಸ್ತುತ ಚುನಾಯಿತ ಪ್ರತಿನಿಧಿಗಳ ಆಡಳಿತ ಅವಧಿಯು ಮುಕ್ತಾಯಗೊಂಡಿದ್ದು, ಮಾನ್ಯ ಆಡಳಿತಗಾರರ ಅಧಿಕಾರ ಅವಧಿಯು ಪ್ರಾರಂಭಗೊಂಡಿರುತ್ತದೆ.

ಈ ಹಿನ್ನಲೆಯಲ್ಲಿ Providing security service to head office premises for the year 2020-21ನೇ ಸಾಲಿನ ಕಾಮಗಾರಿಗೆ ಅನುದಾನ ರೂ.103.20 ಲಕ್ಷಗಳ ಮೊತ್ತವನ್ನು ಪಿಕೋಡ್-3429 ರ ಅಡಿಯಲ್ಲಿ ಅನುವು ಮಾಡಲು ಮತ್ತು ಪ್ರಸ್ತಾಪಿತ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-11-2020ರ ಟಿಪ್ಪಣಿ.

**ತೀರ್ಮಾನ :** **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:03-11-2020ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:13-11-2020 ರ ನಡವಳಿಗಳು**

**ವಿಷಯದ ಸಂಖ್ಯೆ: 505/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 167 ಇಎಎಸ್ 2019, ದಿನಾಂಕ:16-11-2019 ರ ಆದೇಶದ್ವನಯ ಸರ್ಕಾರಿ ಸೇವೆಯಲ್ಲಿರುವಾಗ ಮರಣ ಹೊಂದುವ ನೌಕರರ ಶವಸಂಸ್ಕಾರ ಸಹಾಯಧನ ಪಾವತಿಗೆ ಸಂಬಂಧಿಸಿದ ನಿಯಮಗಳ ನಿಯಮ 4ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ ಆದೇಶಿಸಲಾಗಿರುತ್ತದೆ.

1. "ನಿಯಮ 3ರ ಪ್ರಕಾರ ಕಛೇರಿ ಮುಖ್ಯಸ್ಥರು ರೂ.5000.00 ಗಳಿಗೆ ಕಡಿಮೆ ಇಲ್ಲದೆ ಗರಿಷ್ಠ ರೂ.15000.00 ಗಳ ಶವಸಂಸ್ಕಾರ ಸಹಾಯ ಧನವನ್ನು ಆಯಾ ಪ್ರಕರಣಗಳಿಗನುಸಾರವಾಗಿ ಮಂಜೂರು ಮಾಡಬಹುದು. ಸಹಾಯ ಧನವನ್ನು ಮಂಜೂರು ಮಾಡುವ ಮುನ್ನ ಇಲಾಖಾ ಕಛೇರಿ ಮುಖ್ಯಸ್ಥರು ಸೂಕ್ತ ಮಾಹಿತಿ ಪಡೆದು ಪ್ರಕರಣದಲ್ಲಿ ಮಂಜೂರು ಮಾಡಬೇಕಾದ ಮೊಬಲಗನ್ನು ನಿರ್ಧರಿಸತಕ್ಕದ್ದು.
2. ಮಂಜೂರು ಪ್ರಾಧಿಕಾರವು ಕನಿಷ್ಠಕ್ಕಿಂತ ಹೆಚ್ಚು ಮೊಬಲಗನ್ನು ಮಂಜೂರು ಮಾಡುವ ಪ್ರಕರಣಗಳಲ್ಲಿ ಹಾಗೆ ಮಂಜೂರು ಮಾಡಲು ಇರುವ ಕಾರಣ ಹಾಗೂ ಸನ್ನಿವೇಶಗಳನ್ನು ನಮೂದಿಸತಕ್ಕದ್ದು.

ಆದೇಶವು ಕೂಡಲೇ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ. ಸದರಿ ವಿಷಯದಲ್ಲಿ ಸಾದಿಲ್ವಾರು ವೆಚ್ಚಗಳ ಕೈಪಿಡಿ ಸಂಬಂಧಿಸಿದ ತಿದ್ದುಪಡಿಯನ್ನು ಆರ್ಥಿಕ ಇಲಾಖೆಯು ಪ್ರತ್ಯೇಕವಾಗಿ ಹೊರಡಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 73 ಸೇ-1/2019 ದಿನಾಂಕ:13-11-2019ರನ್ವಯ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 167 ಎಇಎಸ್ 2019, ಬೆಂಗಳೂರು, ದಿನಾಂಕ:16-11-2019 ರಂತೆ ಸರ್ಕಾರಿ ಸೇವೆಯಲ್ಲಿರುವಾಗ ಮರಣ ಹೊಂದಿದ ನೌಕರರ ಶವಸಂಸ್ಕಾರ ಸಹಾಯ ಧನವನ್ನು ಹೆಚ್ಚಿಸುವ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03-10-2020 ರ ಟಿಪ್ಪಣಿ.

**ತೀರ್ಮಾನ :** **ಆಯುಕ್ತರವರ ದಿನಾಂಕ:03-10-2020 ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು